ಒ ಎಸ್ ನಂ. 375/2016 ಪಿಡಬ್ಲ್ಯೂ 1 ಹೆಸರು - ಸೋಮಶೇಖರ ಎ. ವಿ.

ಸಾಕ್ಷಿಯನ್ನು ದಿನಾಂಕಃ 14.03.2019 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿಡಿ ವಕೀಲರಿಂದ ಃ

ನಿಪಿ10 ಕ್ರಯಪತ್ರದ ಪಶ್ಚಿಮ ದಿಕ್ಕಿಗೆ ಶಿವಲಿಂಗಪ್ಪನ ಗದ್ದೆ ಎಂದು ನಮೂದು ಮಾಡಿದೆ ಎಂದರೆ ನಿಜ. ಶಿವಲಿಂಗಪ್ಪ ಪ್ರತಿವಾದಿ ತಾತ ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮ ದಿಕ್ಕಿಗೆ ಇರುವ ಆಸ್ತಿ ತರಿ ಜಮೀನು ಎಂದರೆ ನಿಜ. ಶಿವಲಿಂಗಪ್ಪ ಮತ್ತು ಪ್ರತಿವಾದಿ ತಂದೆ ರಾಜಯ್ಯ ತೀರಿಕೊಂಡ ಮೇಲೆ ಈಗ ಸದರಿ ಆಸ್ತಿ ಪ್ರತಿವಾದಿ ಸ್ವಾಧೀನಾನುಭವದಲ್ಲಿರುತ್ತದೆ ಎಂದರೆ ಸಾಕ್ಷಿಯು ಈಗ ಪಶ್ಚಿಮಕ್ಕೆ ತ್ರಿಪುರಾಂಭ ರವರ ಮನೆ ಇರುತ್ತದೆ ಎಂದು ಹೇಳುತ್ತಾರೆ. ತ್ರಿಪುರಾಂಭ ಪ್ರತಿವಾದಿಯ ಅಕ್ಕ. ಪ್ರತಿವಾದಿ ಸದರಿ ಜಾಗವನ್ನು ಅವರ ಅಕ್ಕನಿಗೆ ನೀಡಿ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ನಿಜ. ನಾನು ತ್ರಿಪುರಾಂಭ ರವರ ವಿರುದ್ಧ ದಾವೆಯನ್ನು ಸಲ್ಲಿಸಿರುವುದಿಲ್ಲ.

ಪ್ರತಿವಾದಿ ಅವರಿಗೆ ಸೇರಿದ ಗದ್ದೆಯ ಎರಡೂವರೆ ಗುಂಟೆಯನ್ನು ನಾನು ಒತ್ತುವರಿ ಮಾಡಿಕೊಂಡಿರುತ್ತೇನೆಂದು ನನ್ನ ವಿರುದ್ಧ ಪ್ರತಿವಾದಿ ಒಎಸ್ ನಂ. 170/2017 ನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆ ಅಪರ ಸಿವಿಲ್ ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ ಎಂದರೆ ನಿಜ. ಪ್ರತಿವಾದಿಗಳ ಆಸ್ತಿಯನ್ನು ನಾನು ಅಕ್ರಮವಾಗಿ ಒತ್ತುವರಿ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ